ಬರೀ ಹೊಲ ತೋಟಗಳೇ ಎದ್ದು ಕಾಣುತ್ತಿದ್ದವು. ಒಂದು ಜತೆ ಹುಂಜ ಹ್ಯಾಟೆಯಿಂದ ಶುರುವಾದ ಕೋಳಿ ಸಂತತಿ ನಮ್ಮ ಚಿಕ್ಕಮ್ಮನ ಆರೈಕೆಯಲ್ಲಿ ಇನ್ನೂರರ ಗಡಿ ದಾಟಿದವು. "ನಿಮ್ಮ ಚಿಕ್ಕಮ್ಮನ ಕೈಗುಣವೇ ಅಂತಾದ್ದು. ಎಲ್ಲರ ಕೈಯಲ್ಲೂ ಮುರ್ಗಿ ಸಂತತಿ ಅಷ್ಟು ಸುಲಭಕ್ಕೆ ಬೆಳಿಯಲ್ಲ" ಎಂದು ಮನೆಗೆ ಬಂದವರೆಲ್ಲಾ ಚಿಕ್ಕಮ್ಮನ ಹಸ್ತಗುಣ ಪ್ರಶಂಸಿಸುತ್ತಿದ್ದರು. ಮಳೆ ಬಾರದೆ ಹೊಲದ ಬೆಳೆ ಕೈಕೊಟ್ಟಾಗ ಮನೆಯ ಒಲೆ ಆರದಂತೆ ನೋಡಿಕೊಂಡವು ಈ ಕೋಳಿಗಳೇನೆ.

ಈ ಕಾರಣಕ್ಕೆ ಕೋಳಿಗಳೆಂದರೆ ಆಕೆಗೆ ಪಂಚಪ್ರಾಣ. ಮಕ್ಕಳಿಗಿಂತ ಹೆಚ್ಚಾಗಿ ಅವುಗಳ ಸಾಕುತ್ತಿದ್ದಳು. ಕೊಯ್ದು ತಿನ್ನುವುದರಲ್ಲಿ ಆಕೆಗೆ ಆಸಕ್ತಿಯೇ ಇರಲಿಲ್ಲ. ಕಷ್ಟದ ಸಮಯಕ್ಕೆ ಮಾರಿ ಕಾಸು ಮಾಡಿಕೊಳ್ಳಲು ತನ್ನ ಮನೆಗಿರುವ ಏಕೈಕ ಮಾರ್ಗ ಇದೊಂದೇ ಎಂದು ಆಕೆ ಬಲವಾಗಿ ನಂಬಿದ್ದಳು. ಹೀಗಾಗಿ ಮೊಟ್ಟೆಗಳನ್ನು ಜೋಪಾನವಾಗಿ ಎತ್ತಿಟ್ಟು ಕಾವಿಗಿಡಿಸಿ ಮರಿ ತೆಗೆಸುತ್ತಿದ್ದಳು. ನಾವೆಲ್ಲಾ "ಚಿಕ್ಕಮ್ಮ ಆಮ್ಲೇಟ್ ಮಾಡಿ ತಿಂತಿವಿ, ಇಲ್ಲಾ ಬೇಯ್ಸಿಸಿಕೊಂಡು ಉಪ್ಪುಕಾರ ಚಿಮಿಕಿಸಿಕೊಂಡು ಚಪ್ಪರಿಸುತ್ತೀವಿ ಒಂದೆರಡು ಮೊಟ್ಟೆ ಕೊಡ್ರಿ" ಎಂದರೆ ಇದೊಂದು ವಿಷಯದಲ್ಲಿ ಪಕ್ಕಾ ಜಿಪುಣೆಯಾದ ಆಕೆ ಅಪ್ಪಿತಪ್ಪಿಯೂ ಕೊಡುತ್ತಿರಲಿಲ್ಲ. ಎಲ್ಲವನ್ನೂ ಕಾವಿಗೆ ಕೂರಿಸಿ ಕೋಳಿಪಿಳ್ಳೆ ತೆಗೆಯುವ ಲೆಕ್ಕಾಚಾರ ಅವಳದು. ಆಕೆಗೆ ಹೇಗೂ ಗಣಿತ ಬರಲ್ಲ ಅನ್ನೋದು ಖಚಿತವಾಗಿ ಗೊತ್ತಿದ್ದ ನಾನು ರಾಶಿ ಮೊಟ್ಟೆಯಲ್ಲಿ ಒಂದೊಂದೇ ಎಗರಿಸುತ್ತಿದ್ದೆ. ಗುಡಿಸಲಿನಿಂದ ದೂರ ಹೋಗಿ ಮಣ್ಣಿನಲಿ ಮೊಟ್ಟೆ ಹೂತಿಟ್ಟು, ಮೇಲೆ ಬೆಂಕಿ ಹಾಕಿ ಸುಟ್ಟ ಮೊಟ್ಟೆಯ ಬಿಡಿಸಿ ತಿನ್ನುತ್ತಿದ್ದೆ. ಅದರ ರುಚಿ ವರ್ಣಿಸಿ ಹೇಳುವುದು ಕಷ್ಟವೇ ಸರಿ.

ಚಿಕ್ಕಮ್ಮ ಬಿದ್ದು ಪೆಟ್ಟು ಮಾಡಿಕೊಂಡ ಕೋಳಿಗಳ ಹಿಡಿದು ವೈದ್ಯಳಂತೆ ಉಪಚಾರ ಮಾಡುತ್ತಿದ್ದಳು. ಕಾಲು ಮುರಿದುಕೊಂಡ ಹ್ಯಾಟೆಯ ಕಾಲಿಗೆ ದಬ್ಬೆ ಬಿಗಿದು ವಾಸಿ ಮಾಡಿದ್ದಳು. "ಈ ಮುರ್ಗಿನ ಸಾಕಿದ ಅವ್ವ ಆ ಕೆಂಚ ಪುಕ್ಕದೋಳು ನೋಡು. ಆ ಬಿಳಿ ತಲೆ ಇರೋಳು ಅಂಡ ಇಟ್ಟೋಳು. ಅಪ್ಪ ಈ ನಾಲ್ಕು ಜನದಾಗೆ ಯಾವ್ದೋ ಹುಂಜ ಇರ್ಬೈದು. ಇಲ್ಲಿ ಮೆಯ್ತಿರೋ ನಾಲ್ಕು ಪಿಳ್ಳೇನು ಒಂದು ವಾರಿಗೇವು. ಅವೂ ಇವೂ ಚಿಗಪ್ಪ ದೊಡ್ಡಪ್ಪನ ಮಕ್ಕಳು. ಅಗೋ! ಈ ಕುತ್ಗೆ ಮ್ಯಾಲೆ ಕೂದ್ಲ ಉದರಿರೋ ಪಾಟ್(ಹೆಂಗೋಳಿ) ಇದ್ದಾಳಲ್ಲ ಅವಳು ಮಾರಿಯಂಥ ಮುಂಡೆ. ಯಾರ್ನೂ ಹತ್ರ ಸೇರಸಲ್ಲ. ಯಾವ್ ಮರಿ ನೋಡಿದ್ರೂ ಕುಕ್ಕುತಾನೆ ಇರ್ತಾಳೆ ಬಜಾರಿ ಮುಂಡೆ" ಎಂದು ಎಲ್ಲಾ ಕೋಳಿಗಳನ್ನು ನೆಂಟರಂತೆ ಪರಿಚಯ ಮಾಡಿಸುತ್ತಿದ್ದಳು.

ಚಿಕ್ಕಮ್ಮನಿಗೆ ಕಪ್ಪು ಬಾಲದ, ಕೆಂಪು ತಲೆಯ 'ಬಿಗ್ ಬಾಸ್' ಹುಂಜನ ಮೇಲೆ ಜಾಸ್ತಿ ವ್ಯಾಮೋಹವಿತ್ತು. ಮನೆ ಮಕ್ಕಳಾದ ನಮಗಿಂತ ನಾಲ್ಕು ತೂಕ ಜಾಸ್ತಿ ಪ್ರೀತಿಯನ್ನ ಆ ಹುಂಜಪ್ಪ ಗಿಟ್ಟಿಸಿದ್ದ. ಹೆಂಗೋಳಿಗಳ ಕ್ಷೇಮ ನೋಡಿಕೊಳ್ಳುವ ರಸಿಕನಾದ ಇವನಿಗೆ ತುಂಬಾ ಪ್ರಾಶಸ್ತ್ಯವಿತ್ತು. ನಮ್ಮ ಮನೆಯ ಕುಕ್ಕಟ ಸಂತತಿ ಬೆಳೆಸಿದ ಮೂಲಪುರುಷನಲ್ಲವೇ ಇವನು. ಹೀಗಾಗಿ ವಿಶೇಷ ಊಟೋಪಚಾರ ಅವನಿಗೆ ನಡೆಯುತ್ತಿತ್ತು. ಕಾಳು ಬೀಸಿ ಹಿಟ್ಟನ್ನು ತಯಾರಿಸಿಕೊಂಡು ನಂತರ ಎಣ್ಣೆಯಲ್ಲಿ ಅದ್ದಿ ಅದಕ್ಕೆ ತಿನ್ನಿಸುತ್ತಿದ್ದಳು. "ಈ ನನ್ಮಗನಿಗೆ ಯಾಕೆ ಇಷ್ಟೊಂದು ಉಪಚಾರ" ಎಂದು ನಾವು ಮೂಗುಮುರಿದರೆ, "ಕಷ್ಟದಲ್ಲಿದ್ದಾಗ ಮನೆಗೆ ಅನ್ನ ತಂದು ಹಾಕಿದ ಪುಣ್ಯಾತ್ಮಾ ಅವನು" ಎಂದು ಪ್ರಶಂಸೆ ಮಾಡಿ ಸಣ್ಣ ಕಣ್ಣೀರು ಚೆಲ್ಲುತ್ತಿದ್ದಳು. ಹುಂಜನ ಮೇಲೆ ಚಿಕ್ಕಮ್ಮನಿಗಿದ್ದ ಪ್ರೀತಿ ನಮಗರ್ಥವಾಗದ ಮಟ್ಟದಲ್ಲಿತ್ತು.

ಬೀಜಕ್ಕೆ ಅಂತ ಬಿಟ್ಟಿದ್ದರಿಂದ ಚಿಕ್ಕಮ್ಮನ ಹುಂಜ ಪೊಗದಸ್ತಾಗಿ ಬೆಳೆದಿತ್ತು. ಬಂದವರೆಲ್ಲಾ ಅದರ ಕೆಂಪು ಟೋಪಿ, ಜೋಲಾಡುವ ಕುತ್ತಿಗೆ, ಬಣ್ಣಬಣ್ಣದ ಪುಕ್ಕಗಳ ನೋಡಿ ಖುಷಿ ಪಡುತ್ತಿದ್ದರು.